**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ.  23/2023**

| | | | |
|---|---|---|---|
| **ಹೆಸರು** | **:** | **ಪದ್ಮಾವತಿ** | **ಚಾ.ಸಾ. 9** |
| **ಗಂಡನ ಹೆಸರು** | **:** | **ತಿಪ್ಪಣ್ಣ** | **ಪ್ರಾ.ಸಾ. 4** |
| **ವಯಸ್ಸು** | **:** | **56 ವರ್ಷ** | **ದಿನಾಂಕ: 30-06-2025** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಗೌಡನ ಹಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:</u>**

ಚಾಸಾ-8, 10 ಮತ್ತು 11 ರವರು ನಮ್ಮ ಊರಿನವರು. ಚಾಸಾ-1 ನನಗೆ ಗೊತ್ತಿಲ್ಲ. ಆರೋಪಿ ಈಶ್ವರ ನಮ್ಮ ಊರಿನವನು. ಮೃತ ಶಾಂತಾಬಾಯಿ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ನಿಪಿ-8 ರಲ್ಲಿರುವ ಮಹಿಳೆಗೆ ನಾನು ಈ ಮೊದಲು ಎಲ್ಲೂ ನೋಡಿಲ್ಲ. ನಿಪಿ-5 ರಿಂದ 7 ರ ಭಾವಚಿತ್ರದಲ್ಲಿರುವ ಆಟೋಗೆ ನಾನು ಈ ಮೊದಲು ನೋಡಿಲ್ಲ. ನನಗೆ ಯಾವುದೇ ಅಪಘಾತವಾಗಿಲ್ಲ.

ಸಾಕ್ಷಿ ಪುನಃ ಮುಂದುವರೆದು ಈಗ 3 ವರ್ಷಗಳ ಹಿಂದೆ ಚಿಂಚೋಳಿಯಿಂದ ಗೌನಳ್ಳಿ ಗ್ರಾಮಕ್ಕೆ ನಾನು, ಪ್ರಾಸಾ-3, ಚಾಸಾ-10 ಮತ್ತು 11 ರವರು ಆಟೋದಲ್ಲಿ ಹೋಗುತ್ತಿದ್ದೇವು. ಆ ದಿನ ಆಟೋವನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಚಲಾಯಿಸುತ್ತಿದ್ದ. ಆಗ ಬಿದ್ದ ಕಾರಣ ನನ್ನ ಬೆರಳಿಗೆ ಗಾಯವಾಗಿರುತ್ತದೆ. ಗಾಯ ಹೇಗೆ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. **ನನಗೆ ಯಾವುದೇ ಅಪಘಾತವಾಗಿಲ್ಲ.**

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು: ಸಹಾಯಕ ಸರಕಾರಿ ಅಭಿಯೋಜಕರಿಂದ:</u>**

ದಿನಾಂಕ 01-06-2022 ರಂದು ಸಾಯಂಕಾಲ 4.10 ಗಂಟೆಗೆ ಚಿಮ್ಮಾಇದಾಲಯಿ ಕ್ರಾಸ್ ಹತ್ತಿರ ಗೌನಳ್ಳಿ ಕಡೆಗೆ ಹೋಗುವಾಗ  ಆರೋಪಿ ಆಟೋವನ್ನು ಅತಿ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿ ಒಮ್ಮೆಲೆ ಬ್ರೇಕ್ ಹಾಕಿದ ಕಾರಣ ಆಟೋ ಪಲ್ಟಿಯಾಗಿರುತ್ತದೆ ನನಗೆ ಗೊತ್ತಿಲ್ಲ. ಆಗ ಆಟೋದಲ್ಲಿ ಕುಳಿತವರಿಗೆ

ಗಾಯವಾಗಿರುತ್ತದೆ ಮತ್ತು ಶಾಂತಾಬಾಯಿರವರು ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ಗೊತ್ತಿದ್ದರು ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ MSS ವಕೀಲರಿಂದಃ</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**